## ಏಲಕ್ಕಿ ಸಿಪ್ಪೆಯಲ್ಲೊಂದು ಕಲೆ

ಸಿಹಿ–ತಿಂಡಿಗಳಿಗೆ ಏಲಕ್ಕಿ ಬಳಸಿದ ನಂತರ ಅದರ ಸಿಪ್ಪೆಯನ್ನು ಕೆಲವರು ಬಿಸಾಡುವುದು ವಾಡಿಕೆ. ಆದರೆ, ಅದರಿಂದಲೂ ಕಲಾಕೃತಿ ರಚಿಸಬಹುದು ಎಂದು ಸಾಬೀತು ಮಾಡಿದ್ದಾರೆ ಇಲ್ಲೊಬ್ಬ ಸೃಜನಶೀಲ ಗೆಳತಿ. ಏಲಕ್ಕಿ ಸಿಪ್ಪೆಯನ್ನು ಜಾಗರೂಕತೆಯಿಂದ ಬಿಡಿಸಿ, ಬೇಕಾಗುವ ರೀತಿಯಲ್ಲಿ ಕತ್ತರಿಸಿಕೊಳ್ಳಬೇಕು. ಒಂದು ರಾತ್ರಿ ಹಿಮ ಬೀಳುವಲ್ಲಿ ಇಟ್ಟರೆ ಮೃದುವಾಗುತ್ತದೆ. ಹಾಗೆ ಮಾಡುವುದರಿಂದ ಕತ್ತರಿಸುವಾಗ ಅದು ತುಂಡಾಗುವುದಿಲ್ಲ. ನಂತರ ಒಂದು ಬಟ್ಟೆಯ ಮೇಲೆ ನಮಗೆ ಬೇಕಾದ ಚಿತ್ರವನ್ನು ಬಿಡಿಸಿಕೊಂಡು, ಆಕೃತಿಯ ಮೇಲೆ ಕೆಳಗಿನಿಂದ ಮೇಲ್ಭಾಗಕ್ಕೆ ಒಂದರ ಮೇಲೆ ಇನ್ನೊಂದನ್ನು ಅಂಟಿಸುತ್ತಾ ಹೋಗಬೇಕು. ಒಂದೆರಡು ಹೂವಿನ ಚಿತ್ರ ದಾರದಿಂದ ಬಿಡಿಸಿದರೆ ಖರ್ಚಿಲ್ಲದ ಒಂದು ಗೋಡೆ ಅಲಂಕಾರದ ಕಲಾಕೃತಿ ಸಿದ್ಧವಾಗುತ್ತದೆ.

–ಪುಷ್ಪ ಎನ್.ಕೆ. ರಾವ್., ಉಡುಪಿ





## ತಾಂತ್ರಿಕ ವಿಶೇಷದ ಥೀಮ್ ಪಾರ್ಕ್

ಧರ್ಮಸ್ಥಳದ ಗೋಮಟೇಶ್ವರ, ಜಪಾನಿನ ಬುದ್ಧ ವಿಗ್ರಹ... ಇತ್ಯಾದಿ ಶಿಲ್ಪಕಲೆಗಳು ರೂಪುಗೊಂಡಿರುವ ಕಾರ್ಕಳದ ಕರಿಕಲ್ಲ ಶಿಲೆಯ ಮೇಲೆ ಇತ್ತೀಚೆಗೆ ಬೃಹತ್ ಪೌರಾಣಿಕ ಮೂರ್ತಿಯೊಂದು ತಲೆಯೆತ್ತಿ ನಿಂತು ಸಂಗೀತವ ಹಾಡುತ್ತಿದೆ. ಅದು 'ಪರಶುರಾಮ ಥೀಮ್ ಪಾರ್ಕ್' ಎಂಬ ಹೆಸರಿನೊಂದಿಗೆ ಅತ್ಯಾಧುನಿಕ ಪ್ರವಾಸಿ ತಾಣವಾಗಿಯೂ ಪ್ರಸಿದ್ಧಿ ಪಡೆಯುತ್ತಿದೆ.

ಭಗವಾನ್ ವಿಷ್ಣುವಿನ ಆರನೇ ಅವತಾರ, ತುಳುನಾಡಿನ ಸೃಷ್ಟಿಕರ್ತ ಎಂದು ನಂಬಲಾಗುವ ಪರಶುರಾಮನ 33 ಅಡಿಯೆತ್ತರದ, 15 ಟನ್ ಭಾರದ ಕಂಚು ಹಾಗೂ ಉಕ್ಕು ಮಿಶ್ರಿತ ಮೂರ್ತಿಯನ್ನು ಇಲ್ಲಿನ ಬೈಲೂರಿನ ಉಮಿಕಲ್ ಬೆಟ್ಟವೆಂಬ ಬೃಹತ್ ಶಿಲಾ ಸಮುಚ್ಛಯದ ಮೇಲೆ ಸ್ಥಾಪಿಸಲಾಗಿದೆ. ಬಲಗೈಯಲ್ಲಿ ಕೊಡಲಿ, ಎಡಗೈಯಲ್ಲಿ ಬಿಲ್ಲನ್ನು ಹಿಡಿದು ಎಡಗಾಲನ್ನು ಎತ್ತರಿಸಿಟ್ಟಿರುವಂಥಾ ಭಾರೀ ಮೂರ್ತಿಯನ್ನು ವಿಶಾಲ ಕಟ್ಟಡವೊಂದರ ಮೇಲ್ಭಾಗದಲ್ಲಿ ನಿರ್ಮಿಸಲಾಗಿರುವುದು ವಿಶೇಷತೆಯಾಗಿದೆ. ಸದ್ರಿ ಕಟ್ಟಡದೊಳಗೆ ಭಜನಾಮಂದಿರ, ಆಧುನಿಕ ಆಡಿಯೊ ವಿಶುವಲ್ ಮ್ಯೂಸಿಯಂ, ಬಯಲು ರಂಗಮಂದಿರ, ವ್ಯೂ ಪಾಯಿಂಟ್, ಪರಶುರಾಮನ ಕಥೆ ಬಿತ್ತರಿಸುವ ಭಿತ್ತಿ ಚಿತ್ರಗಳ ಪ್ರದರ್ಶನ ಮತ್ತು ರೆಸ್ಟೋರೆಂಟ್... ಇವೆಲ್ಲವೂ ಅಡಕವಾಗಿದೆ. ಈ ಥೀಮ್ ಪಾರ್ಕ್ ದೇಶ ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಸಂಜೆ ವಿದ್ಯುತ್ ದೀಪಾಲಂಕೃತ ಪರಶುರಾಮ ಥೀಮ್ ಪಾರ್ಕಿನ ದೃಶ್ಯ ಸುಂದರವಾಗಿ ಕಾಣುತ್ತದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ





## ಒಂದು ಮರ ಹಲವರಿಗೆ ವರ

ಬಿಸಿಲ ಧಗೆಗೆ ತಂಪನ್ನೀಯುವ, ಮಳೆಯ ಬಿರುಸಿಗೆ ಆಸರೆಯನ್ನೀಯುವ 'ದೇವರಮರ' ಎಂದೇ ಪ್ರಸಿದ್ಧಿಯಾಗಿರುವ ಈ ಆಲದ ಮರವಿರುವುದು ಮೈಸೂರು–ಟಿ. ನರಸೀಪುರ ಹಾದಿಯಲ್ಲಿ. ಈ ಮರಕ್ಕೀಗ ಸರಿಸುಮಾರು 400 ವರ್ಷ. ಈ ಮರದ ಸುತ್ತಲೂ ರೆಂಬೆಕೊಂಬೆಗಳು ಚಾಚಿಕೊಂಡಿವೆ.

ಪ್ರಣಯ ಹಕ್ಕಿಗಳಿಗೆ ಸೆಲ್ಫಿ ತಾಣವಿದು. ಪುಂಡರಿಗೆ ಗ್ಯಾಂಗ್ ಡಿಸ್ಕಷನ್ ಟೇಬಲ್ ಇದಾದರೆ, ಹಿರಿಯರಿಗೆ ಹರಟೆಯ ಹಳ್ಳಿಕಟ್ಟೆಯೂ. ತಂಗಾಳಿಯ ಮಡಿಲಲ್ಲಿ ನಿದ್ರಿಸುವವರಿಗೆ ತಂಪಾದ ಗಾಳಿಯ ಜೋಗುಳವನ್ನಾಡಿದರೆ, ತನ್ನನ್ನು ನಂಬಿ ಆರಾಧಿಸುವವರಿಗೆ ವರವನ್ನೀಯುವ ಮರವೂ. ಅನೇಕ ಚಲನಚಿತ್ರಗಳಿಗೆ ಪೋಸು ಕೊಟ್ಟ ಕೀರ್ತಿಯು ಈ ಮರಕ್ಕಿದೆ.

–ಮೆಲಿಷ್ಯಾ ಡಿಸೋಜಾ